

ಯೂಟ್ಯೂಬಿನಿಂದ ಹೊಸ ಹೊಸ ಅಡುಗೆ, ತಿಂಡಿಗಳನ್ನು ಕಲಿತು ಪ್ರಯೋಗ ಮಾಡುವುದೆಂದರೆ ಅವಳಿಗೆ ಇನ್ನಿಲ್ಲದ ಹುಮ್ಮಸ್ಸು. ಮಡದಿಯ ಈ ಹುರುಪು ಪ್ರಸಾದನಿಗೆ ಪ್ರಿಯ. ಅವನ ಅಮ್ಮನಿಗೆ ಗೊತ್ತಿರದಿದ್ದ, ಅವನ ಅಮ್ಮ ಯಾವತ್ತೂ ಮಾಡಿರದಿದ್ದ, ಮನೆಯ ಹೊರಗಷ್ಟೇ ಇಂತವುಗಳ ರುಚಿ ಸವಿಯಬಹುದೆನ್ನುವ ಪ್ರಸಾದನ ನಂಬಿಕೆ ಬುಡಮೇಲಾಗುವಂತೆ ದಿನವೂ ಮನೆಯಲ್ಲಿ ಹೊಸರುಚಿಯ ಹಬ್ಬ. ಬೇಕುಬೇಕಾದ ಸಾಮಾನು ಸರಂಜಾಮುಗಳನ್ನು ತಾನೇ ಹತ್ತಿರದ ಮಾಲ್‌ನಿಂದ ಕೊಂಡು ತರುತ್ತಿದ್ದಳು ಪತ್ನಿ. ಪ್ರಸಾದನೇ ದುಡ್ಡು ಕೊಡಬೇಕೆಂದೇನಿಲ್ಲ. ಕಾಲೇಜು ಅಧ್ಯಾಪಕರಾಗಿ ನಿವೃತ್ತರಾಗಿದ್ದ ಅವಳ ಅಪ್ಪನಿಗೆ ಕೈ ತುಂಬಾ ನಿವೃತ್ತಿ ವೇತನ ಸಿಗುತ್ತಿತ್ತು. ಮಗಳ ಹೆಸರಲ್ಲಿ ಒಂದು ಖಾತೆ ತೆರೆದು ಅವಳ ಅಗತ್ಯಗಳಿಗೆಂದು ಆಗೀಗ ಸಣ್ಣ, ದೊಡ್ಡ ಮೊತ್ತದ ಹಣ ಹಾಕುವ ಅಭ್ಯಾಸ ಅವರಿಗಿತ್ತು. ದುಡ್ಡಿಗೋಸ್ಕರ ಯಾವತ್ತೂ, ಯಾರ ಮರ್ಜಿಯನ್ನೂ ಕಾಯಬೇಕಾದ ಅಗತ್ಯ ಕಲ್ಪನಾಳಿಗೆ ಬಂದಿದ್ದೇ ಇಲ್ಲ. ಹೀಗಿರುವಾಗ...

***

ಮಗಳ ಮನೆ ಅಂದರೆ ಪರಸ್ಥಳವಲ್ಲ. ಇದ್ದೂರಲ್ಲೇ ಹದಿನೈದಿಪ್ಪತ್ತು ಕಿ.ಮೀ.ಗಳ ದೂರ. ಬೆಂಗಳೂರಿನಂತಾ ಮಹಾನಗರದಲ್ಲಿ ಇದೊಂದು ದೂರವೇ ಅಲ್ಲ. ನೆನೆಸಿಕೊಂಡಾಗ ಬೀಗರಾದವರು ಮಗಳ ಮನೆಗೆ ಬರುತ್ತಿದ್ದರು. ಬರಲಿ, ಅವರಿಗಾದರೂ ಮತ್ತ್ಯಾರಿದ್ದಾರೆ? ಪ್ರಸನ್ನನಾಗಲೀ ಪಂಕಜಾಕ್ಷಿಯಾಗಲೀ ಅವರನ್ನು ಆದರದಿಂದ ಬರಮಾಡಿಕೊಳ್ಳುತ್ತಿದ್ದರು.

‘ಹೋಗೋ, ಅಪ್ಪ, ಅಮ್ಮನ್ನ ಕರ್ಕೊಂಡ್ಬಾ. ವೀಕೆಂಡು...’ ಎಂದು ಕಲ್ಪನಾ ಪ್ರಸಾದನಿಗೆ ಹೇಳುವುದು, ನಿಂತ ಕಾಲಲ್ಲಿ ಅವನು ಕಾರು ಹೊರಡಿಸಿಕೊಂಡು ಹೋಗಿ ಕರೆದುಕೊಂಡು ಬರುವುದು ಮಾಮೂಲಿನ ಸಂಗತಿಯಾಗಿತ್ತು. ಅಮ್ಮನಿಂದ ಮಗಳಿಗೆ ಪಾಕಶಾಸ್ತ್ರದ ಕುರಿತು ಒಲವು ಹುಟ್ಟಿಕೊಂಡಿತ್ತೋ, ಮಗಳಿಂದ ಅಮ್ಮನಿಗೋ ಗೊತ್ತಿಲ್ಲ. ಕಲ್ಪನಾ ಡಬಲ್ ಗ್ರ್ಯಾಜುಯೇಟ್. ಎಂ.ಎಸ್ಸಿ. ಪದವೀಧರೆ. ಒಂದಷ್ಟು ಕಾಲ ಯಾವುದೋ ಖಾಸಗಿ ಕಾಲೇಜಿನಲ್ಲಿ ಹಂಗಾಮಿ ಉಪನ್ಯಾಸಕಿಯಾಗಿ ದುಡಿದ ಅನುಭವ ಬೆನ್ನಿಗಿದೆ. ಆದರೆ ಮದುವೆಯಾದ ಮೇಲೆ ಅವಳು ಕೆಲಸಕ್ಕೆ ಹೋಗಬೇಕೆಂಬ ಅಪೇಕ್ಷೆ ತೋರಿಸಿರಲಿಲ್ಲ. ಆ ಕುರಿತು ಅವಳಿಗೆ ಯಾವ ಮಹತ್ವಾಕಾಂಕ್ಷೆಯೂ ಇರಲಿಲ್ಲ. ‘ಅವಳಿಗೆ ಕೆಲಸಕ್ಕೆ ಹೋಗಲು ಉತ್ಸಾಹವಿದ್ದರೆ ಹೋಗಲಿ’ ಎಂದು ಪಂಕಜಾಕ್ಷಿ ಅಂದುಕೊಂಡಿದ್ದಿತ್ತು. ‘ಏನೋ? ಏನಂತಿ?’ ಮಗನ ಅಭಿಪ್ರಾಯ ಕೇಳಿದ್ದಿತ್ತು. ಎಲ್ಲಾ ಮದುವೆಗೆ ಮುನ್ನ. ‘ಅದೆಲ್ಲಾ ಅವಳಿಗೇ ಬಿಟ್ಬಿಡೋಣ’ ಅಂದಿದ್ದ ಪ್ರಸಾದ. ವಿವಾಹಾನಂತರ ಕಲ್ಪನಾ ಆ ಕುರಿತು ಚಕಾರ ಎತ್ತದೆ ಮನೆಯಲ್ಲಿರುವುದನ್ನು, ಮನೆಗೆಲಸವನ್ನು ಸುಖಿಸುವುದನ್ನು ರೂಢಿಸಿಕೊಂಡುಬಿಟ್ಟಳು. ‘ಅದೂ ಒಂದು ರೀತಿಯಲ್ಲಿ ಚಂದ’ ಅನಿಸಿತು ಪ್ರಸಾದನ